

ಸೂರ್ಯೋದಯ
ಚಿತ್ರಕೃಪೆ: ಸ್ಕಾಟ್ ಜಾಕ್ಸನ್ ಅಮೇರಿಕಾದ ಜಿಯೊಲಾಜಿಕಲ್ ಸರ್ವೆ

‘ಇಂಡಿಯನ್ನರು’ ಸೂರ್ಯನನ್ನು ‘ಇನ್ಟಿ’ ಎಂಬ ಹೆಸರಿನ ದೇವನಾಗಿ ಪರಿಗಣಿಸಿದರು.

ಭಾರತೀಯ ಸಂಸ್ಕೃತಿಯಲ್ಲಿ, ಪುರಾಣಗಳಲ್ಲಿ ಸೂರ್ಯನಿಗೆ ಮಹತ್ತರವಾದ ಸ್ಥಾನವಿದೆ. ಅನೇಕ ಬಾರಿ ಸೂರ್ಯನನ್ನು ವರ್ಣಿಸುವಾಗ ಆತ ಏಳು ಶ್ವೇತಾಶ್ವಗಳಿಂದ ಎಳೆಯಲ್ಪಡುತ್ತಿರುವ ರಥದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಭಾರತೀಯ ಪುರಾಣಗಳಲ್ಲಿ ಬರುವ ಪಾತ್ರಗಳಲ್ಲಿ ಕೆಲವು ಪ್ರಮುಖರಾದ ಯಮ, ಅಶ್ವಿನಿ ದೇವತೆಗಳು, ಕರ್ಣ ಹಾಗೂ ಸುಗ್ರೀವ ಇವರುಗಳನ್ನು ಸೂರ್ಯದೇವನ ಪುತ್ರರೆಂದು ಪರಿಗಣಿಸಲಾಗುತ್ತದೆ. ಸೂರ್ಯನಿಗೆ ಇರುವ 108 ಹೆಸರುಗಳ ಪೈಕಿ ಭಾಸ್ಕರ, ದಿವಾಕರ, ದಿನಕರ, ಆದಿತ್ಯ, ರವಿ, ಇವು ಹೆಚ್ಚು ಪ್ರಚಲಿತ. ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಸೂರ್ಯ ನಮಸ್ಕಾರ, ಆದಿತ್ಯ ಹೃದಯ (ಶ್ಲೋಕ), ಮುಂತಾದ ಪದಗಳೂ ನಮಗೆ ಚಿರಪರಿಚಿತ.

ಸೂರ್ಯನಿಗಾಗಿ ನಿರ್ಮಿಸಲಾದ ದೇವಾಲಯಗಳು ಭಾರತದ ವಿವಿಧ ಭಾಗಗಳಲ್ಲಿ ಮಾತ್ರವಲ್ಲದೆ, ಭಾರತದಾಚೆ ಕೂಡ ಇವೆ. ಒಡಿಶಾದ ಕೊನಾರ್ಕ್‌ನ ಸೂರ್ಯದೇವಾಲಯ, ಕಾಶ್ಮೀರದ ಮಾರ್ತಾಂಡ ದೇವಾಲಯ, ಗುಜರಾತ್‌ನ ಮೊಧೆರಾದಲ್ಲಿನ ಸೂರ್ಯ ದೇವಾಲಯ, ಕುಂಭಕೋಣಂನ ಆರ್ಯನಾರ್ ದೇವಾಲಯ, ಪಾಕಿಸ್ತಾನದ ಮುಲ್ತಾನ್‌ನಲ್ಲಿರುವ ಸೂರ್ಯ ದೇವಾಲಯ, ಇವುಗಳನ್ನು ಹೆಸರಿಸಬಹುದು. ಸೂರ್ಯನಿಗೆ ಸಂಬಂಧಿಸಿದ ಹಬ್ಬಗಳಾದ ಮಕರ ಸಂಕ್ರಾಂತಿ, ರಥಸಪ್ತಮಿ, ಛಟ್ (ಬಿಹಾರ, ಉತ್ತರಪ್ರದೇಶ, ನೇಪಾಲ), ಸಾಂಬ ದಶಮಿ (ಒಡಿಶಾ) – ಇವುಗಳನ್ನು ಭಾರತದ ವಿವಿಧೆಡೆ ಸಂಭ್ರಮದಿಂದ ಆಚರಿಸಲಾಗುತ್ತದೆ.



ಆಕಾಶಕಾಯಗಳು, ಆ ಗ್ರಹಗಳನ್ನು ಸುತ್ತುವ 220ಕ್ಕೂ ಹೆಚ್ಚು ಉಪಗ್ರಹಗಳು, ಪ್ಲೂಟೊದಂತಹ ಕುಬ್ಜಗ್ರಹಗಳು (ಡ್ವಾರ್ಫ್ ಪ್ಲಾನೆಟ್ಸ್), ಗ್ರಹಗಳ ಚೂರುಗಳಂತೆ ಗೋಚರಿಸುವ ಕ್ಷುದ್ರಗ್ರಹಗಳು (ಆಸ್ಟರಾಯ್ಡ್ಸ್), ಧೂಮಕೇತುಗಳೆಂಬ ಹಿಮಾವೃತವಾದ ಆಕಾಶಕಾಯಗಳು, ಇವುಗಳ ಚೂರುಗಳು, ಇವೆಲ್ಲವೂ ಸೌರವ್ಯೂಹದ ವ್ಯಾಪ್ತಿಯಲ್ಲಿ ಬರುತ್ತವೆ. ಗ್ರಹಗಳ ಪೈಕಿ ಒಂದಾದ ಭೂಮಿ ನಮ್ಮ ವಾಸದ ತಾಣ ಎಂಬುದು ನಮಗೆಲ್ಲರಿಗೂ ತಿಳಿದಿದೆ.

ಸೂರ್ಯನಿಗೂ ಮತ್ತು ಸೌರವ್ಯೂಹದಲ್ಲಿರುವ ಇತರ ಆಕಾಶಕಾಯಗಳಿಗೂ ಒಂದು ಪ್ರಮುಖವಾದ ವ್ಯತ್ಯಾಸವಿದೆ. ಸೂರ್ಯ ನಕ್ಷತ್ರವೆಂಬುದೇ ಆ ವ್ಯತ್ಯಾಸಕ್ಕೆ ಕಾರಣವಾಗಿವೆ. ನಕ್ಷತ್ರವಾಗಿರುವ ಕಾರಣದಿಂದಾಗಿ ಸೂರ್ಯ ತನ್ನ ಬೆಳಕು ಹಾಗೂ ಶಾಖವನ್ನು ಸ್ವತಃ ತಾನೇ ಬೈಜಿಕ ಕ್ರಿಯೆಗಳ (ನ್ಯೂಕ್ಲಿಯರ್ ರಿಯಾಕ್ಷನ್ಸ್) ಮೂಲಕ ಉತ್ಪಾದಿಸಿದರೆ, ಸೌರವ್ಯೂಹದ ಇತರ ಆಕಾಶಕಾಯಗಳೆಲ್ಲವೂ ಸೂರ್ಯನ ಬೆಳಕನ್ನು ಪ್ರತಿಫಲಿಸಿ ಆ ಮೂಲಕ ತಮ್ಮ ಅಸ್ತಿತ್ವವನ್ನು ಪ್ರಕಟಮಾಡುತ್ತವೆ.

ಬೃಹತ್ ಪ್ರಮಾಣದ ದ್ರವ್ಯರಾಶಿಯಿಂದಾಗಿ ಸೂರ್ಯನೆಂಬ ಆಕಾಶಕಾಯ ಭೂಮಿಯೂ ಸೇರಿದಂತೆ ತನ್ನನ್ನು ಸುತ್ತುತ್ತಿರುವ ಸೌರವ್ಯೂಹದ ಆಕಾಶಕಾಯಗಳೆಲ್ಲವನ್ನೂ ತನ್ನ ಪ್ರಬಲವಾದ ಗುರುತ್ವಾಕರ್ಷಣಾ ಕ್ಷೇತ್ರದ ಪಾಶದಲ್ಲಿ ಬಂಧಿಸಿಟ್ಟಿದೆ. ಇಂದು ಸೌರವ್ಯೂಹದಲ್ಲಿನ ಬಹುತೇಕ ಚಟುವಟಿಕೆಗಳಿಗೆ, ಅದರಲ್ಲೂ ಸೂರ್ಯನನ್ನು ಸುತ್ತುತ್ತಿರುವ ಗ್ರಹಗಳ ಪೈಕಿ ಮೂರನೆಯದಾದ ಭೂಮಿಯ ಮೇಲಿನ ಚಟುವಟಿಕೆಗಳಿಗೆ ಸೂರ್ಯನೇ ಕಾರಣ. ಭೂಮಿಯ ಮೇಲೆ ಜೀವ ಉತ್ಪನ್ನವಾಗಲು, ವಿಕಾಸಹೊಂದಲು ಹಾಗೂ ದೀರ್ಘಕಾಲ ಉಳಿಯಲು ಸೂರ್ಯನೇ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಕಾರಣ ಎಂದು ವಿಜ್ಞಾನಿಗಳು ನುಡಿಯುತ್ತಾರೆ.

ಪ್ರತಿದಿನವೂ ಸೂರ್ಯೋದಯದ ವೇಳೆಯಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳು, ಜೀವಿಗಳು ತಮ್ಮ ಚಟುವಟಿಕೆಗಳನ್ನು ಎಷ್ಟು ಉತ್ಸಾಹದಿಂದ ಪ್ರಾರಂಭಿಸುತ್ತವಲ್ಲವೇ? ಉದಯಿಸುತ್ತಿರುವ ಸೂರ್ಯನ ದೃಶ್ಯ ನಯನಮನೋಹರವಲ್ಲದೇ ಮನಸ್ಸನ್ನೂ ಪುಳಕಿತಗೊಳಿಸುತ್ತದೆ. ಹೀಗೆ ತನ್ನ ಉಪಸ್ಥಿತಿಯಿಂದ ಮಾನವನ ಜೈವಿಕ ಚಟುವಟಿಕೆಗಳಿಗೆ ಎರವಾಗುವ ಸೂರ್ಯನನ್ನು ಪ್ರಾಚೀನ ನಾಗರೀಕತೆಗಳು ದೇವಾಧಿದೇವತೆಯನ್ನಾಗಿ ಪರಿಗಣಿಸಿದ್ದು ಸಹಜವೇ ಆಗಿದೆ.

## ಸೂರ್ಯನ ಅಗಾಧತೆ

ಹತ್ತಿರ ಹತ್ತಿರ ಹದಿಮೂರು ಸಾವಿರ ಕಿಲೋಮೀಟರ್ ವ್ಯಾಸವುಳ್ಳ (ಡಯಾಮೀಟರ್) ನಮ್ಮ ಭೂಮಿಗೆ ಹೋಲಿಸಿದಲ್ಲಿ ಹದಿನಾಲ್ಕು ಲಕ್ಷ ಕಿಲೋಮೀಟರ್ ವ್ಯಾಸದ ಸೂರ್ಯ ಅಗಾಧವಾದ ಆಕಾಶಕಾಯವೇ ಸರಿ. ಸೂರ್ಯನೊಳಗೆ ಒಂದಲ್ಲಾ